ಮುಂದುವರಿಸಲೂ ಬಿಡುತ್ತಿಲ್ಲ. ಉಡುಪಿ ಕ್ಷೇತ್ರದ ಕೆಲವು ಹೈಸ್ಕೂಲುಗಳಲ್ಲಿ ಸ್ಥಳಾವಕಾಶವಿದ್ದರೂ ಸಹ ಫೇಲಾದ ಮಕ್ಕಳನ್ನು ಹೊರಗಿಟ್ಟು ಅಸ್ಪೃಶ್ಯರಂತೆ ನೋಡುತ್ತಿದ್ದಾರೆ. ಹೊಸದಾಗಿ ಸೇರುವ ಮಕ್ಕಳಿಗೆ ಜಾಗ ನೀಡುವುದರ ಜೊತೆಗೆ, ಫೇಲಾದ ಮಕ್ಕಳನ್ನು ಮಲತಾಯಿ ಮಕ್ಕಳಂತೆ ನೋಡ ಬಾರದು. ಅವರು ಅನಾಥ ಪ್ರಜೆಗಳಾಗಬಾರದು ಅವರಿಗೂ ಮುಂದಿನ ವಿದ್ಯಾಭ್ಯಾಸಕ್ಕೆ ಅನುವು ದೊರಕಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಪಿ. ಲಕ್ಷ್ಮೀಸಾಗರ್.—ಮಾರ್ಚ್ ತಿಂಗಳ ಪರೀಕ್ಷೆಯಲ್ಲಿ ಫೇಲ್ ಆದಂತಹವರು ಜೂನ್ ತಿಂಗಳಲ್ಲಿ ಪ್ರಾರಂಭವಾಗತಕ್ಕಂತಹ ಶಾಲೆಗಳಿಗೆ ಸೇರಿಕೊಳ್ಳಲಿ ಎಂಬ ಉದ್ದೇಶದಿಂದ ಅವರಿಗೆ ಇನ್ನೊಂದು ಪರೀಕ್ಷಾ ಅವಕಾಶವನ್ನು ಮಾಡಿಕೊಟ್ಟಿದ್ದೇವೆ ಸರ್ಕಾರ ಇದರ ಬಗ್ಗೆ ಈಗಾಗಲೇ ಘೋಷಣೆ ಮಾಡಿದೆ. ಆ ಪರೀಕ್ಷೆಯಲ್ಲಿ ತೇರ್ಗಡೆಯಾದರೆ ಅವರು ಜೂನ್ ತಿಂಗಳಲ್ಲಿ ಶಾಲೆಗೆ ಹೋಗಬಹುದು. ಎಷ್ಟು ವರ್ಷ ಫೇಲ್ ಆಗಿರುವವರಿಗೆ ಸ್ಕೂಲ್‌ನಲ್ಲಿ ಸ್ಥಳಾವಕಾಶವಾಗಲೀ, ವಿದ್ಯಾ ಅವಕಾಶವನ್ನಾಗಲೀ, ಕೊಡುವುದಕ್ಕೆ ಸಾಧ್ಯ ? ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ಮಾರ್ಚ್ ತಿಂಗಳಲ್ಲಿ ಫೇಲ್ ಆದವರು ಜೂನ್ ತಿಂಗಳಲ್ಲಿ ನಡೆಯುವ ಸಪ್ಲಿಮೆಂಟರಿ ಪರೀಕ್ಷೆಗೆ ಕೂತು ಆದರಲ್ಲಿ ತೇರ್ಗಡೆಯಾದರೆ ಅವರು ಶಾಲೆಗೆ ಸೇರಬಹುದು. ಶಾಲೆಗೆ ಸೇರಲು ಅನುಕೂಲವಾಗಲೀ ಎಂದು ಜೂನ್ ತಿಂಗಳು ಮುಂಗಿಯು ವುದರೊಳಗೆ ಪರೀಕ್ಷೆಯನ್ನು ಮಾಡುತ್ತೇವೆ. ಅವರು ಇದರ ಉಪಯೋಗವನ್ನು ಮಾಡಿಕೊಳ್ಳಬೇಕು. ಪ್ರತಿ ವರ್ಷ ಫೇಲ್ ಆಗಿರುವವರಿಗೆ ಸ್ಕೂಲ್‌ಗಳಲ್ಲಿ ಎಲ್ಲಿಯವರೆಗೆ ಸ್ಥಳಾವಕಾಶವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ ? ಕೆಳಗಡೆಯಿಂದ ಪಾಸಾಗಿ ಬರುವವರಿಗೆ ಜಾಗ ಬೇಡವೇ ? ಮಾನ್ಯ ಸದಸ್ಯರಿಯವರು ಆ ಶಾಲೆಯಲ್ಲಿ ಜಾಗ ಇದೆ ಎಂದು ಹೇಳುತ್ತಿದ್ದಾರೆ, ನಾನು ಉತ್ತರವನ್ನು ತರಿಸಿ ಸದಸ್ಯರಿಯವರಿಗೆ ಕೊಡುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಅಧ್ಯಕ್ಷರೇ, ಇದಕ್ಕೆ ಉತ್ತರ ಇದೆಯೋ ಇಲ್ಲವೋ ?

ಅಧ್ಯಕ್ಷರು.—ನೀವು ಓದಿ ಹೇಳ್ರಿ. ಉತ್ತರ ಇವತ್ತೇ ಕೊಡಬಹುದು, ನಾಳೆ ಕೊಡಬಹುದಂ ಇಲ್ಲ ಎಂದರೆ ನಾಡಿದ್ದು ಕೊಡಬಹುದು. ಸಾಮಾನ್ಯವಾಗಿ ೧೦೦ಕ್ಕೆ ೭೫ರಷ್ಟು ಉತ್ತರವನ್ನು ಇಲ್ಲೇ ಕೊಡುತ್ತಾರೆ ತಾವು ಮೊದಲು ಓದ್ರಿ ಷಿಳಿಕ್ಕೆ ಮಂತ್ರಿಗಳು ಉತ್ತರವನ್ನು ಈಗಲೇ ಕೊಡಲೇ ಬೇಕು ಎಂದೇನೂ ಇಲ್ಲ. ತಾವು ಮೊದಲು ಓದಿ.

ಶ್ರೀ ಬಿ. ಸ್ವಾಮಿರಾವ್ —ಓದಿ ಓದಿ ಕೂಚುಭಟ್ಟ ಆದ ಎನ್ನುವ ಹಾಗೆ ಆಗಿದೆ. ಉತ್ತರ ಬರುವುದಿಲ್ಲ, ಸುಮ್ಮನೆ ಓದಬೇಕು.

ಅಧ್ಯಕ್ಷರು.—ನೀವು ಓದಿ ಹೇಳ್ರಿ.

ಶ್ರೀ ಬಿ. ಸ್ವಾಮಿರಾವ್,—ಸುಮ್ಮನೆ ಏತಕ್ಕೆ ಓದಿ ಹೇಳಬೇಕು ? ಉತ್ತರ ಯಾವುದಕ್ಕೂ ಬಂದಿಲ್ಲ.

ಅಧ್ಯಕ್ಷರು.—ಅದನ್ನು ಸದನದ ಗಮನಕ್ಕೆ ತರುವುದು ನಿಮ್ಮ ಕರ್ತವ್ಯ. ತಾವು ಓದ್ರಿ. ಸ್ವಾಮಿರಾವ್ ಓದ್ರಿ.

ಶ) ರಾಜ್ಯ ವಾಣಿಜ್ಯ ಸಂಸ್ಥೆಗಳ ಸಂಘದವರು ವಾಣಿಜ್ಯ ಶುಲ್ಕವನ್ನು ಸರ್ಕಾರದ ಆದೇಶಕ್ಕೆ ವಿರುದ್ಧವಾಗಿ ವಸೂಲು ಮಾಡುತ್ತಿರುವುದು.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ. ಕರ್ನಾಟಕ ರಾಜ್ಯ ವಾಣಿಜ್ಯ ಸಂಸ್ಥೆಗಳ ಸಂಘದವರು ವಾಣಿಜ್ಯ ಶಿಕ್ಷಣ ಶುಲ್ಕವನ್ನು ಹೆಚ್ಚಿಸಿ ಆ ರೀತಿ ವಸೂಲು ಮಾಡಬೇಕೆಂದು ಎಲ್ಲ ವಾಣಿಜ್ಯ ಸಂಸ್ಥೆಗಳಿಗೂ ತಿಳಿಸಿದ್ದು, ಆದರಂತೆ ಎಲ್ಲ ಸಂಸ್ಥೆಗಳವರೂ ಕಳೆದ ಮೂರು ತಿಂಗಳಿಂದಲೂ ಹೆಚ್ಚಿನ ಶುಲ್ಕ ವಸೂಲು ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದ್ದು ಈ ಬಗ್ಗೆ ಶಿಕ್ಷಣ ಇಲಾಖೆಯ ನಿರ್ದೇಶಕರು ಹೆಚ್ಚಿನ ಶುಲ್ಕ ವಸೂಲು ಮಾಡಕೂಡದೆಂದು ಪತ್ರಿಕಾ ಪ್ರಕಟಣೆಯನ್ನು ನೀಡಿದ್ದಾಗ್ಯೂ ಸದರಿ ಸಂಸ್ಥೆಗಳು ಹೆಚ್ಚಿನ ಶುಲ್ಕವನ್ನು ವಸೂಲು ಮಾಡುವುದನ್ನು ನಿಲ್ಲಿಸಲಿಲ್ಲ. ಈ ಬಗ್ಗೆ ಅನೇಕ ದೂರುಗಳು ಸರ್ಕಾರಕ್ಕೆ ಬಂದಿವೆ. ಆದರೆ ಈಗ ಸರ್ಕಾರದವರು ಕರ್ನಾಟಕ ರಾಜ್ಯ ವಾಣಿಜ್ಯ ಶಿಕ್ಷಣ ಸಂಸ್ಥೆಗಳ ಸಂಘದ ಮನವಿಯ ಮೇರೆಗೆ ವಾಣಿಜ್ಯ ಶಿಕ್ಷಣದ ಮಾಸಿಕ ಶುಲ್ಕವನ್ನು ಹೆಚ್ಚಿಸಿ ಆದೇಶ

ಹೊರಡಿಸಿದೆ. ಹೊಸದರಗಳು ಜೂನ್ ಒಂದರಿಂದ ಜಾರಿಗೆ ಬರುವುದಾಗಿ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಆದರೆ ವಿದ್ಯಾರ್ಥಿಗಳು ಈ ಮೊದಲೇ ಕಳೆದ ಮೂರು ತಿಂಗಳಿಂದಲೂ ಹೆಚ್ಚಿನ ಶುಲ್ಕವನ್ನು ನೀಡಿದ್ದಾರೆ. ಸದರಿ ಸರ್ಕಾರಿ ಆದೇಶದಲ್ಲಿ ಯಾಂತ್ರಿಕ ಶುಲ್ಕ ಹಾಗೂ ವಾಚನಾಲಯ ಶುಲ್ಕ ಹೆಚ್ಚಿಸಿರುವುದಾಗಿ ತಿಳಿಸಲಾಗಿಗೆ ಆದರೆ ಯಾವುದೇ ವಾಣಿಜ್ಯ ಸಂಸ್ಥೆಯು ವಾಚನಾಲಯವನ್ನು ಹೊಂದಿರುವುದಿಲ್ಲ. ಅಲ್ಲದೆ ವಿದ್ಯಾರ್ಥಿಗಳಿಗೆ ಯಾಂತ್ರಿಕ ಶಿಕ್ಷಣವನ್ನು (ಮೆಕ್ಯಾನಿಸಂ) ಕಲಿಸುತ್ತಿಲ್ಲ. ವಾಣಿಜ್ಯ ಶಿಕ್ಷಣ ಸಂಸ್ಥೆಗಳ ಕಾರ್ಯವೈಖರಿ ಹೀಗಿದ್ದರೂ ಕೂಡಾ ಸರ್ಕಾರದವರು ವಿವೇಚನೆ ಇಲ್ಲದೆ ವಾಚನಾಲಯ ಶುಲ್ಕ ಮತ್ತು ಯಾಂತ್ರಿಕ ಶಿಕ್ಷಣ ಶುಲ್ಕವನ್ನು ಹೆಚ್ಚಿಸಿರುವುದು ತೀರಾ ಖಂಡನೀಯ. ಈ ಬಗ್ಗೆ ಸಾರ್ವಜನಿಕ ಶಿಕ್ಷಣ ಇಲಾಖೆಯವರು ಅಧ್ಯಯನ ಹಾಗೂ ಪರಿಶೀಲನಾ ಸಮಿತಿಯೊಂದನ್ನು ನೇಮಿಸಿ ಪ್ರತಿಯೊಂದು ವಾಣಿಜ್ಯ ಸಂಸ್ಥೆಯನ್ನು ಸಂದರ್ಶಿಸಿ ಎಲ್ಲೆಲ್ಲಿ ವಾಚನಾಲಯ ಇರುವುದಿಲ್ಲವೋ ಅಂತಹ ಸಂಸ್ಥೆಗಳ ಬಗ್ಗೆ ಸರ್ಕಾರದವರು ವರದಿ ಪಡೆದು ಅಂತಹ ಸಂಸ್ಥೆಗಳ ಮಾನ್ಯತೆಯನ್ನು ರದ್ದುಗೊಳಿಸುವುದಲ್ಲದೆ ಅಂತಹ ಸಂಸ್ಥೆಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುತ್ತೇನೆ.

ಅಲ್ಲದೆ ಸದರಿ ವಾಣಿಜ್ಯ ಶಿಕ್ಷಣ ಸಂಸ್ಥೆಗಳು ರಾಜ್ಯ ಸಂಘವವರು ಕೇಳಿಕೊಳ್ಳುವಂತೆ ಆಗಾಗ್ಗೆ ಸರ್ಕಾರದವರು ಮಾಸಿಕ ಶುಲ್ಕವನ್ನು ಹೆಚ್ಚಿಸುತ್ತಿರುವುದರಿಂದ, ಸದರಿ ಸಂಸ್ಥೆಗಳು ಬಳಸುತ್ತಿರುವ ವಿದ್ಯುತ್ತಿಗೆ ಈಗ ವಿಧಿಸಲಾಗುತ್ತಿರುವ ಗೃಹೋಪಯೋಗಿ ವಿದ್ಯುತ್ ದರದ ಬದಲಾಗಿ ವಾಣಿಜ್ಯೋದ್ದೇಶ ವಿದ್ಯುತ್ ದರವನ್ನು ವಿಧಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿ, ಈ ಬಗ್ಗೆ ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಅನೇಕ ವಿವರಗಳನ್ನು ಕೇಳಿದ್ದಾರೆ. ಉತ್ತರ ತರಿಸಿ ಕೊಡುತ್ತೇನೆ.

6) ಅಂಕೋಲ ತಾಲ್ಲೂಕಿನ ಹೆಬ್ಬಾಳ ಗ್ರಾಮದ ಸೈಯದ್ ಮಂಹಮದ್ ಸಯ್ಯ ಇಸೂಬ್ ಹೆಬ್ಬುಳ್ಳ ಇವರಿಗೆ ಅರಣ್ಯ ಇಲಾಖೆಯವರು ಮರ ಕಡಿಯಲು ಪರವಾನಗಿ ಕೊಟ್ಟು ನಿರಾಕರಿಸಿರುವುದು

ಶ್ರೀ ಆರ್. ಎನ್. ನಾಯಕ್.—ಅಂಕೋಲಾ ತಾಲ್ಲೂಕಿನ ಹೆಬ್ಬಾಳ ಗ್ರಾಮದ ಬ್ಲಾಕ್ ನಂ. ೫೬ ಶ್ರೀ ಸಯ್ಯದ್ ಮಹಮದ್ ಸಯ್ಯ ಇಸೂಬ್ ಸಾಬ್ ಹೆಬ್ಬುಳ್ಳ ಇವರಿಗೆ ಸೇರಿದ್ದು, ಅವರು ಸದರಿ ಸ್ಥಳದಲ್ಲಿ ವಾಸಿರುತ್ತಾರೆ. ಅರಣ್ಯ ಇಲಾಖೆಯ ಪರವಾನಗಿ ಪಡೆದು ಆ ಸ್ಥಳದಲ್ಲಿರುವ ಮರಗಳನ್ನು ಕಡಿದು ಅವರು ಸ್ವಂತ ಉಪಯೋಗಿಸಲು ಈಗಾಗಲೇ ಸಂಗ್ರಹಿಸಿಟ್ಟು ೩ ವರ್ಷ ಕಳೆದು ಹೋಗಿದೆ. ಅರಣ್ಯ ಇಲಾಖೆಯವರು ಒಮ್ಮೆ ಮರ ಮುಟ್ಟುಗಳನ್ನು ಬಯ್ಯಲು ಅನುಮತಿ ಕೊಟ್ಟು ಈಗ ಮತ್ತೊಮ್ಮೆ ನಿರಾಕರಿಸಿದ್ದಾರೆ ಸದರಿಯವರಿಗೆ ಇದರಿಂದ ಬಹಳ ತೊಂದರೆಯಾಗಿದೆ. ಅತನ ಪೂರ್ವಜರು ಬೆಳೆಸಿದಂತಹ ಮರಕ್ಕೆ ಸೀನಿಯರ್ ರೇಜ್ ದರದ ಪ್ರಕಾರ ಅಪಾರ ಹಣ ತುಂಬಲು ಇಲಾಖೆ ಸತಾಯಿಸುತ್ತಿರುವುದು ಕಾನೂನು ಬಾಹಿರ ಹಾಗೂ ಕರ್ನಾಟಕ ಫಾರೆಸ್ಟ್ ಆಕ್ಟ್ ಮತ್ತು ರೂಲ್ಸ್‌ನಲ್ಲೆಲ್ಲಿಯೂ ಖಾಸಗಿ ಯವರು ಹಣ ತುಂಬುವ ಬಗ್ಗೆ ನಮೂದಿಸಿಲ್ಲ ಕಾರಣ ಯಾವ ಅಡೆತಡೆಯಿಲ್ಲದೆ ಸದರಿ ರೈತನಿಗೆ ಮರ ಸಾಗಿಸಲು ಪರವಾನಿಗೆ ನೀಡಲು ಆದೇಶಿಸುವ ಬಗ್ಗೆ ಸರಕಾರದ ಗಮನ ಸೆಳೆಯುತ್ತೇನೆ.

ಶ್ರೀ ಜಿ. ಎಸ್. ಬಾಗಲಕೋಟಿ.— ಈ ವಿಷಯದ ಬಗ್ಗೆ ಮಾನ್ಯ ಸದಸ್ಯರು ಗಮನ ಸೆಳೆದಿದ್ದಾರೆ. ಎರಡು ದಿವಸದಲ್ಲಿ ಉತ್ತರ ತರಿಸಿಕೊಡುತ್ತೇನೆ.

7) ಪಾವಗಡ ತಾಲ್ಲೂಕಿನ ವೈ. ಎನ್. ಹೊಸಕೋಟೆ ಹೋಬಳಿಯ ರಂಗ ಸಮುದ್ರದ ಕೆ. ಸಿ. ಶೀನಪ್ಪ ಇವರಿಗೆ ಜಮೀನಿನ ಹಕ್ಕು ಭಾದ್ಯತಾ ಪತ್ರ ನೀಡಲು ಒತ್ತಾಯ.

ಶ್ರೀಮತಿ ಸುಮಾ ವಸಂತ್.

ಮಾನ್ಯ ಅಧ್ಯಕ್ಷರೇ,

ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ವೈ. ಎನ್. ಹೊಸಕೋಟೆ ಹೋಬಳಿ ರಂಗ ಸಮುದ್ರದ ಕೆ. ಸಿ. ಶಾನಪ್ಪ ಅವರಿಗೆ ಭೂ ಸುಧಾರಣಾ ಶಾಸನದನ್ವಯ ಬಂದ ಜಮೀನನ್ನು ಕಷ್ಟ